OS 05/2020

DW-01

**ದಿನಾಂಕಃ 04-04-2026.**

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟಿ ಸವಾಲುಃ ವಾದಿಗಳ ಪರ ಶ್ರೀ RMH ಮಾನ್ಯ ವಕೀಲರಿಂದ**

ನಾನು B.Sc LLB ಪದವೀಧರ. ನಾನು accounts officer ಎಂದು ಕರ್ತವ್ಯ ನಿರ್ವಹಿಸುತ್ತಿದ್ದು ಈಗ ನಿವೃತ್ತಿ ಹೊಂದಿರುತ್ತೇನೆ. ನಾನು 2017 ರಲ್ಲಿ ನನ್ನ ಸದರಿ ಕೆಲಸದಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ಸನ್ 1983 ರಿಂದ ನಿವೃತ್ತಿ ಹೊಂದುವವರೆಗೆ ಬೇರೆ ಬೇರೆ ಸ್ತಳಗಳಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ ಎಂದರೆ ಸರಿ. ನಾನು ಕಳೆದ 10 ವರ್ಷಗಳಿಂದ ಕಲಬುರಗಿಯಲ್ಲಿ ನನ್ನ ಕುಟುಂಬದವರೊಂದಿಗೆ ವಾಸ ಮಾಡುತ್ತಿದ್ದೇನೆ. ನಾನು ಚಟ್ನಳ್ಳಿ ಗ್ರಾಮದಲ್ಲಿ ನನ್ನ ಕುಟುಂಬದೊಂದಿಗೆ ಯಾವತ್ತಿಗೂ ಶಾಶ್ವತವಾಗಿ ವಾಸ ಮಾಡಿರುವುದಿಲ್ಲ ಎಂದರೆ ಸರಿ ಆದರೆ ಸದರಿ ಗ್ರಾಮಕ್ಕೆ ಹೋಗಿ ಬಂದು ಮಾಡುತ್ತಿದ್ದೆ. ನಾನು ಚಟ್ನಳ್ಳಿ ಗ್ರಾಮದ ವಿಳಾಸಕ್ಕಾದಂತೆ ನ್ಯಾಯ ಪಡಿತರ ಚೀಟಿ, ಆಧಾರ ಕಾರ್ಡ ಹಾಗೂ ಚುನಾವಣಾ ಗುರುತಿನ ಚೀಟಿಯನ್ನು ಹೊಂದಿರುವುದಿಲ್ಲ ಎಂದರೆ ಸರಿ. 1 ನೇ ಮೃತ ಪ್ರತಿವಾದಿ ನನ್ನ ಹಿರಿಯ ಸಹೋದರ ಎಂದರೆ ಸರಿ. ವಾದಿ ನನ್ನ 2 ನೇ ಸಹೋದರ ಎಂದರೆ ಸರಿ. ವಾದಿಯು ಚಟ್ನಳ್ಳಿ ಗಾಮದಲ್ಲಿಯೇ ಕೃಷಿ ಕೆಲಸವನ್ನು ಮಾಡಿಕೊಂಡು ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಮೃತ 1 ನೇ ಪ್ರತಿವಾದಿ ಅವರ ಕುಟುಂಬದವರೊಂದಿಗೆ ಯಾದಗಿರಿಯಲ್ಲಿ ಸನ್ 2000 ನೇ ಇಸವಿಯಿಂದ ವಾಸ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಮೃತ 1 ನೇ ಪ್ರತಿವಾದಿ ತಮ್ಮ ಜೀವಿತ ಕಾಲಾವಧಿಯಲ್ಲಿ ಕೃಷಿ ಕೆಲಸವನ್ನು ಮಾಡದೇ ಊರಿನಲ್ಲಿ ಲೇವಾದೇವಿ ಕೆಲಸವನ್ನು ಮಾಡಿಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಮ್ಮ

3 ಜನ ಅಣ್ಣ ತಮ್ಮಂದಿಯರಿಗೆ ಶ್ರೀಮತಿ ಗಿರಿಜಮ್ಮ ಒಬ್ಬರೇ ಸಹೋದರಿ ಎಂದರೆ ಸರಿ. ನನ್ನ ಸದರಿ ಅಕ್ಕ ಇವರಿಗೆ ದೇವದುರ್ಗ ತಾಲೂಕಿನ ಒಂದು ಹಳ್ಳಿಗೆ ಮದುವೆ ಮಾಡಿಕೊಡಲಾಗಿತ್ತು ಆದರೆ ಯಾವ ಹಳ್ಳಿ ಎಂದು ನನಗೆ ನೆನಪಿರುವುದಿಲ್ಲ. ಸದರಿ ಗಿರಿಜಮ್ಮ ತಮ್ಮ ಮದುವೆಯಾದ ದಿನದಿಂದಲೂ ಅವರು ಸಾಯುವರೆಗೂ ಚಟ್ನಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದರು ಎಂದರೆ ಸದರಿ ಗಿರಿಜಮ್ಮ ಇವರಿಗೆ ಮಕ್ಕಳು ಇರಲಿಲ್ಲ ಎಂದರೆ ಸರಿ.

2. ಸಾಕ್ಷಿಗೆ ಈಗ ನೀವು 3 ಜನ ಅಣ್ಣ ತಮ್ಮಂದಿಯರು ಹಾಗೂ ಸದರಿ ನಿಮ್ಮ ಸಹೋದರ ನಿಮ್ಮ ಕುಟುಂಬದ ಸ್ವತ್ತುಗಳನ್ನು ಯಾವಾಗ ವಿಭಾಗ ಮಾಡಿಕೊಂಡಿರುತ್ತೀರಿ ಎಂದು ಕೇಳಿದ್ದಕ್ಕೆ ಸಾಕ್ಷಿ ಅದು ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ವಿಭಾಗ ಆಗಿರುತ್ತದೋ ಇಲ್ಲವೋ ಎಂದು ನಿಮಗೆ ಇವತ್ತಿವರೆಗೂ ಗೊತ್ತಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ವಿಭಾಗ ಆಗಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ದಾವಾ ಸ್ವತ್ತುಗಳು ಸದರಿ ಮೃತ ಗಿರಿಜಮ್ಮ ಇವರ ಹೆಸರಿನಲ್ಲಿ ಇರುತ್ತವೆ ಎಂದು ಹೇಳಿದ್ಕಕ್ಕೆ ಸಾಕ್ಷಿ ಕೇವಲ ದಾವಾ ಅನುಸೂಚಿ 1 ಮಾತ್ರ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ದಾವಾ ಅನುಸೂಚಿ 1 ಸ್ವತ್ತು ಸದರಿ ಗಿರಿಜಮ್ಮ ಇವರಿಗೆ ಹೇಗೆ ಹೋಗಿರುದೆ ಎಂದು ಕೇಳಿದ್ದಕ್ಕೆ ಸಾಕ್ಷಿ ಈ ಮೊದಲು ಸನ್ 1981 ರಲ್ಲಿ ಸದರಿ ಸ್ವತ್ತು ತಮ್ಮ ಹೆಸರಿನಲ್ಲಿತ್ತು ಎಂದು ಹೇಳುತ್ತಾರೆ. ನಾನು ಸನ್ 1982 ರಲ್ಲಿ ಸದರಿ ದಾವಾ ಅನುಸೂಚಿ 1ನೇ ಸ್ವತ್ತನ್ನು ಸದರಿ ಮೃತ ಗಿರಿಜಮ್ಮ ಇವರಿಗೆ ಅವರ maintenance ಗಾಗಿ ಕೊಟ್ಟಿರುತ್ತೇನೆ. ಸದರಿ ಗಿರಿಜಮ್ಮ ಇವರ ಮದುವೆಯ 1978 ರಲ್ಲಾಗಿರುತ್ತದೆ. ಸದರಿ ಗಿರಿಜಮ್ಮ ಇವರು ತಮ್ಮ ಗಂಡನ ಮನೆಯಲ್ಲಿ ಎಷ್ಟು ದಿನ ಬಾಳುವೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಅನುಸೂಚಿ

1 ನೇ ಸ್ವತ್ತನ್ನು ಖರೀದಿ ಮಾಡಿರುತ್ತೇನೆ. ಸದರಿ ಸ್ವತ್ತನ್ನು ಸನ್ 1968-69 ರಲ್ಲಿ ಖರೀದಿ ಮಾಡಿದ್ದು ಆದರೆ ಯಾರಿಂದ ಹಾಗೂ ಎಷ್ಟು ಮೊತ್ತಕ್ಕೆಂದು ಈಗ ಹೇಳಲು ನೆನಪಿರುವುದಿಲ್ಲ. ಸನ್ 1968-69 ನೇ ಸಾಲಿನಲ್ಲಿ ನನ್ನ ವಯಸ್ಸು 10-12 ವರ್ಷ ಇತ್ತು. ಸನ್ 1968-69 ರಲ್ಲಿ ನಾನು ಯಾವ ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಮಾಡುತ್ತಿದ್ದೆ ಎಂದು ಹೇಳಲು ನೆನಪಿರುವುದಿಲ್ಲ ನಾನು ಸದರಿ ಸಂದರ್ಭದಲ್ಲಿ student ಆಗಿದ್ದೆ. ಸದರಿ ಸ್ವತ್ತನ್ನು ಖರೀದಿ ಮಾಡಲು ನನ್ನ ತಂದೆಯವರು ಹಣವನ್ನು ನನಗೆ ಕೊಟ್ಟಿರುತ್ತಾರೆ.

3. ಸನ್ 1981 ರಲ್ಲಿ ನನ್ನ ತಂದೆಯವರು ದಾವಾ ಅನುಸೂಚಿ 2 ನೇ ಸ್ವತ್ತನ್ನು ಸದರಿ ಮೃತ ಗಿರಿಜಮ್ಮ ಇವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತು ಮೃತ ಗಿರಿಜಮ್ಮ ಇವರ ಹೆಸರಿನಲ್ಲಿ ಯಾವತ್ತಿಗೂ ಇರುವುದಿಲ್ಲ ಆದರೆ ಅದು ನನ್ನ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ಸನ್ 1999 ರಲ್ಲಿ ನನ್ನ ಹೆಸರಿಗೆ ಬಂದಿರುತ್ತದೆ. ಸನ್ 1999 ರ ಮುಂಚಿತವಾಗಿ ಸದರಿ ಸ್ವತ್ತು ನಮ್ಮ ತಂದೆಯವರ ಹೆಸರಿನಲ್ಲಿದ್ದು ಸನ್ 1999 ರಲ್ಲಿ ನಮ್ಮ ಅಣ್ಣ ತಮ್ಮಂದಿಯರು mutual consent ನ ಮೇಲೆ ಸದರಿ ಸ್ವತ್ತನ್ನು ನನ್ನ ಹೆಸರಿಗೆ ಕೊಡಲಾಗಿರುತ್ತದೆ. ಸದರಿ ಸ್ವತನ್ನು ನನಗೆ ಬರಹ ರೂಪದಲ್ಲಿ ಕೊಡಲಾಗಿರುತ್ತದೆ. ಸದರಿ ಬರಹವವನ್ನು ಒಂದು stamp paper ಮೇಲೆ ಬರೆಯಲಾಗಿರುತ್ತದೆ. ಸನ್ 1999 ರಲ್ಲಿಯೇ ಸದರಿ ಸ್ವತ್ತು ನನ್ನ ಹೆಸರಿಗೆ ವರ್ಗಾವಣೆ ಆಗಿರುತ್ತದೆ.

4. ದಾವಾ ಸ್ವತ್ತುಗಳನ್ನು ನಮ್ಮ ತಂದೆಯವರು ಮೂರು ಜನರಿಗೆ ಪಾಲು ಮಾಡಿ ಕೊಟ್ಟಾಗ ನಮ್ಮ ಮೃತ ಅಕ್ಕ ಗಿರಿಜಮ್ಮ ಇವರ maintenance ಗೆ ಕೊಡಲಾಗಿರುತ್ತದೆ ಎಂದರೆ ಸರಿ. ಸದರಿ ಮೃತ ಗಿರಿಜಮ್ಮ ಇವರು ದಾವಾ ಅನಸೂಚಿ

1 ನೇ ಸ್ವತ್ತನ್ನು ನನಗೆ ಮೃತ್ಯು ಪತ್ರದ ಮೂಲಕ ಕೊಟ್ಟಿರುತ್ತಾರೆ ಎಂದು ಹೇಳಲು ನಿಡಿ.5 ನ್ನು ಹಾಜರುಪಡಿಸಿರುತ್ತೇನೆ. ಸದರಿ ಗಿರಿಜಮ್ಮ ಇವರು ದಿಃ 12-06-2015 ರಲ್ಲಿ ಮರಣ ಹೊಂದಿರುತ್ತಾರೆ. ನಿಡಿ.5 ನ್ನು 2014 ರಲ್ಲಿ ಆಗಿದು ಆದರೆ ನನಗೆ ನಿಖರವಾದ ದಿನಾಂಕ ಗೊತ್ತಿರುವುದಿಲ್ಲ. ನಿಡಿ.5 ರ stamp ನ್ನು ಯಾರು ಹಾಗೂ ಯಾವ ಊರಿನಲ್ಲಿ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ.5 ರ ಒಕ್ಕಣಿಗಳ ಮಾಹಿತಿಯನ್ನು ಯಾರು ಯಾರಿಗೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ.5 ರ ಬಗ್ಗೆ ನನಗೆ 2018 ರಲ್ಲಿ ತಿಳಿದು ಬಂದಿರುತ್ತದೆ ಆದರೆ ನನಗೆ ನಿಖರವಾದ ದಿನಾಂಕ ಹೇಳಲು ಬರುವುದಿಲ್ಲ. ನಿಡಿ.5 ರಂತೆ ದಾಖಲೆಯನ್ನು 1 ನೇ ಮೃತ ಪ್ರತಿವಾದಿ ನನಗೆ ಕೊಟ್ಟಿರುತ್ತಾರೆ. ನಿಡಿ.5 ಮೃತ 1 ನೇ ಪ್ರತಿವಾದಿ ಹತ್ತಿರ ಹೇಗೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿಯು ಮೇ 5 ರಂದು ತೀರಿಕೊಂಡಿದ್ದು ಆದರೆ ಯಾವ ವರ್ಷ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ.5 ಕ್ಕೆ ಇಬ್ಬರು ಸಾಕ್ಷಿಗಳು ಸಹಿ ಹಾಕಿದ್ದು ಆದರೆ ಯಾರು ಯಾರು ಎಂದು ನನಗೆ ನೆನಪಿರುವುದಿಲ್ಲ. ನಿಡಿ.5 ನ್ನು ಬರೆಯುವ ಸಂದರ್ಭದಲ್ಲಿ ನಾನು ಇರಲಿಲ್ಲ. ನಿಡಿ.5 ರ ಸಾಕ್ಷಿಗಳು ಯಾವ ಊರಿನವರು ಆಗಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ.5 ರಲ್ಲಿ 12 ತೊಲೆ ಬಂಗಾರವನ್ನು ಸದರಿ ಗಿರಿಜಮ್ಮ ಇವರು ತಮ್ಮ ಮೂರು ಜನ ಅಣ್ಣ ತಮ್ಮಂದಿರು ಸಮಾನವಾಗಿ ಹಂಚಿಕೊಳ್ಳಬೇಕೆಂದು ನಮೂದು ಮಾಡಿರುವುದು ನನಗೆ ಗೊತ್ತಿರುವುದಿಲ್ಲ. ನಿಡಿ.5 ನ್ನು ಕೊಡುವ ಸಂದರ್ಭದಲ್ಲಿ ಮೃತ 1 ನೇ ಪ್ರತಿವಾದಿ ನನಗೆ ಯಾವುದೇ ಬಂಗಾರವನ್ನು ಕೊಟ್ಟಿರುವುದಿಲ್ಲ. ನಿಡಿ.5 ರ 1 ನೇ ಸಾಕ್ಷಿ ಶ್ರೀ ಶಿವಾನಂದಯ್ಯ ಇವರ ಪರಿಚಯ ನನಗೆ ಇರುತ್ತದೆ ಹಾಗೂ 2 ನೇ ಸಾಕ್ಷಿ ಶ್ರೀ ಮೋನಪ್ಪ ಇವರ ಪರಿಚಯ ಇರುವುದಿಲ್ಲ. ಸದರಿ ಸಾಕ್ಷಿದಾರರು ಸದರಿ ಮೃತ ಗಿರಿಜಮ್ಮ ಹಾಗೂ

ಮೃತ 1 ನೇ ಪ್ರತಿವಾದಿ ಇವರುಗಳಿಗೆ ಪರಿಚಯ ಇರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ.5 ರ ಒಕ್ಕಣಿಗಳನ್ನು ಬೆರಳಚ್ಚು ಮಾಡಿಸಿದ್ದು ಹಾಗೂ ಸಾಕ್ಷಿದಾರರ ಹೆಸರುಗಳನ್ನು ಕೈ ಬರಹದಲ್ಲಿ ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ನಮ್ಮ ತಂದೆಯವರು ಸದರಿ ಮೃತ ಗಿರಿಜಮ್ಮ ಇವರಿಗೆ ಕೊಟ್ಟಿದ್ದರೂ ಕೂಡಾ ದಾವಾ ಸ್ವತ್ತುಗಳನ್ನು ಕಬಳಿಸಲು ನಿಡಿ.5 ರ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಿರಿಜಮ್ಮ ಇವರು ದಾಖಲೆಗಳ ಮೇಲೆ ಕನ್ನಡ ಭಾಷೆಯಲ್ಲಿ ಸಹಿಯನ್ನು ಮಾಡುತ್ತಿದ್ದರು. ಸದರಿ ಗಿರಿಜಮ್ಮ ಇವರ ಸಹಿಯನ್ನು ನೋಡಿದರೆ ನನಗೆ ಗುರುತಿಸಲು ಆಗುವುದಿಲ್ಲ. ಸದರಿ ಗಿರಿಜಮ್ಮ ಇವರು ಸಹಿ ಮಾಡುವುದನ್ನು ನಾನು ಯಾವತ್ತಿಗೂ ನೋಡಿರುವುದಿಲ್ಲ.

**5. ನ್ಯಾಯಾಲಯದ ಪ್ರಶ್ನೆ:** ಸದರಿ ಗಿರಿಜಮ್ಮ ಇವರು ಸಹಿ ಮಾಡುವುದನ್ನು ನೀವು ನೊಡದೇ ಇದ್ದರೂ ಕೂಡಾ ಅವರು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದು ಯಾವ ಆಧಾರದ ಮೇಲೆ ಹೇಳುತ್ತೀದ್ದೀರಿ?

**ಉತ್ತರ:** ತಮ್ಮ ತಂದೆಯವರು ಸದರಿ ಗಿರಿಜಮ್ಮ ಇವರು ಕನ್ನಡ ಭಾಷೆಯಲ್ಲಿ ಸಹಿ ಮಾಡುತ್ತಿದ್ದರು ಎಂದು ಹೇಳಿತ್ತಾರೆ.

6. ಸನ್ 2014 ರಲ್ಲಿ ಸದರಿ ಮೃತ ಗಿರಿಜಮ್ಮ ಇವರು SBI Bank ನಲ್ಲಿ ದಾವಾ ಸ್ವತ್ತನ್ನು mortgage ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ.5 ರ ಸಾಕ್ಷಿಗಳ ಸಹಿಗಳನ್ನು ನಾನು ಈ ಮೊದಲು ನೋಡಿರುವುದಿಲ್ಲ ಎಂದರೆ ಸರಿ. ಸದರಿ ಶಿವಾನಂದ ಹಾಗೂ ಮೋನಪ್ಪ ಇವರುಗಳು ನಿಡಿ.5 ರ ಮೇಲೆ ಸಹಿಗಳನ್ನು ಮಾಡಿರುವುದು ನಾನು ನೋಡಿರುವುದಿಲ್ಲ.

7. ಸಾಕ್ಷಿಗೆ ಈಗ ಇವತ್ತಿಗೂ ಕೂಡಾ ನಮ್ಮ ಕುಟುಂಬದ ಆಸ್ತಿಗಳನ್ನು ಸರ್ವೆ ಮಾಡಿ ವಿಭಾಗ ಮಾಡಿಕೊಂಡಿರುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ಸರ್ವೆ ಮಾಡಿಸದೇ ವಿಭಾಗ ಮಾಡಿಕೊಂಡಿರುವುದಾಗಿ ಎಂದು ಹೇಳುತ್ತಾರೆ. ನಿಡಿ.5 ರಲ್ಲಿ ನಮೂದು ಮಾಡಿರುವ ಸ್ವತನ್ನು ನನ್ನ ಹೆಸರಿಗೆ ವರ್ಗಾವಣೆ ಮಾಡಬೇಕೆಂದು ಶಹಾಪೂರ ತಹಶೀಲ್ದಾರ ಇವರಿಗೆ ಅರ್ಜಿ ಸಲ್ಲಿಸಿರುತ್ತೇನೆ. ಸದರಿ ಅರ್ಜಿಗೆ ವಾದಿ ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ನನ್ನ ಅರ್ಜಿಗೆ 1 ನೇ ಪ್ರತಿವಾದಿಯ ಹೆಂಡತಿ ಶ್ರೀಮತಿ ಶಂಕ್ರಮ್ಮ ಇವರೂ ಕೂಡಾ ತಕರಾರು ಸಲ್ಲಿಸಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಮೃತ ಗಿರಿಜಮ್ಮ ಇವರು ತೀರಿಕೊಂಡ ಮೇರೆಗೆ ದಾವಾ ಸ್ವತ್ತುಗಳಲ್ಲಿ ನಮ್ಮ 3 ಜನ ಅಣ್ಣ ತಮ್ಮಂದಿಯರಿಗೆ ಸಮಾನವಾದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನಮ್ಮ 3 ಜನರಿಗೆ ಸದರಿ ದಾವಾ ಸ್ವತ್ತುಗಳಲ್ಲಿ ಸಮಾನವಾದ ಪಾಲು ಇದ್ದರು ಕೂಡಾ ವಾದಿಗೆ ಪಾಲು ಕೊಡಬಾರದು ಎಂದು ಹೇಳಿ ಸುಳ್ಳಾದ ನಿಡಿ.5 ರಂತೆ ದಾಖಲೆಯನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ನಿಮ್ಮ ಪಿತ್ರಾರ್ಜಿತ ಸ್ವತ್ತುಗಳು ಎಂದು ಹೇಳಿದ್ದಕ್ಕೆ ಸಾಕ್ಷಿ ದಾವಾ ಅನುಸೂಚಿ-1 ನ್ನು ಖರೀದಿ ಮಾಡಿರುವುದಾಗಿ ಹೇಳುತ್ತಾರೆ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಸ್ವತ್ತುಗಳಾಗಿದ್ದರೂ ಕೂಡಾ ವಾದಿಗೆ ಅದರಲ್ಲಿ ಪಾಲು ಕೊಡಬಾರದು ಎಂದು ಹೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ.5 ನ್ನು ನಾನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಗಿರಿಜಮ್ಮ ಹಾಗೂ ಸಾಕ್ಷಿಗಳ ಸಹಿಗಳನ್ನು ನಿಡಿ.5 ರ ಮೇಲೆ ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**1 ನೇ ಪ್ರತಿವಾದಿ ಪರ ಮಾನ್ಯ ವಕೀಲರು ಸಾಕ್ಷಿಯ ಪಾಟಿ ಸವಾಲು ಮಾಡಲು ವೇಳೆ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು. ಪ್ರ.ದ.ನ್ಯಾ.ದಂ. ಶಹಾಪೂರ.